4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

ಸಿ.ಸಿ ನಂ- 12724/08 ಅ.ಸಾ.-2

ಪ್ರ.ವ.ಬೊ. ದಿಃ 18-5-19

ಸಾಕ್ಷಿದಾರನ ಹೆಸರು : ನರಸೇಗೌಡ
ತಂದೆಯ ಹೆಸರು : ಲಿಂಗಯ್ಯ
ವಯಸ್ಸು : 51 ವರ್ಷ
ಕೆಲಸ : ಸರ್ಕಾರಿ ನೌಕರ
ವಾಸ : ಪೀಣ್ಯಾ ಬೆಂಗಳೂರು

ಮುಖ್ಯ ವಿಚಾರಣೆ ಹಿ.ಸಾ.ಸ.ಅ ರವರಿಂದಃ

ಆರೋಪಿತರು ಗೊತ್ತು, ಈ ಕೇಸಿನ ದೂರುದಾರರು ಗೊತ್ತು. 2006 ಜನವರಿ ಅಲ್ಲಿ ನಾನು ಮತ್ತು ದೂರುದಾರರು ಖನಿಜ ಭವನ ಹತ್ತಿರ ಹೋಗಿದ್ದೆವು. ಅಲ್ಲಿ 2 ಮತ್ತು 3 ನೇ ಆರೋಪಿತರು ಮತ್ತು ಅವರ ಜೊತೆ 4-5 ಜನ ಇದ್ದರು. ಆಗ ಎರಡನೇ ಆರೋಪಿ ಏನು ದಾಖಲೆಗಳನ್ನು ತಂದ್ದೀರಾ ಎಂದು ದೂರುದಾರರನ್ನು ಕೇಳಿದರು. ದೂರುದಾರರು ಅವರ ದಾಖಲೆಗಳನ್ನು ಎ-2 ರವರಿಗೆ ಕೊಟ್ಟರು. ನಂತರ ರಾಮಕೃಷ್ಣ ರವರು ಸೈಟಿಗೆ ಸಂಬಂಧಿಸಿದಂತೆ 2 ಲಕ್ಷ ರೂಗಳು ನಿವೇಶನೆಗೆ ಸಂಬಂಧಿಸಿದಂತೆ ಕಟ್ಟಬೇಕೆಂದು ಕೇಳಿರದು. ಅದಕ್ಕೆ ದೂರುದಾರರು ಈಗ ನಿವೇಶನಕ್ಕೆ ಕಟ್ಟಬೇಕಾದ ಹಣವನ್ನು ಪೂರ್ತಿ ಕಟ್ಟಿದ್ದೇನೆಂದು ಹೇಳಿದರು. ಆಗ ದೂರುದಾರರು ಎರಡನೇ ಆರೋಪಿಗೆ ಕಾನೂನು ಬಾಹಿರವಾಗಿ ಕೇಳುತ್ತಿರುವ 2 ಲಕ್ಷ ರೂಗಳನ್ನು ದೂರುದಾರರು ಕೊಡುವುದಿಲ್ಲ ಎಂದು ಎ-2 ರವರಿಗೆ ಹೇಳಿದರು. ಅದಾದ ನಂತರ ಎ-2 ರವರು ಕೆಲವು ದಾಖಲೆಗಳನ್ನು ದೂರುದಾರರಿಗೆ ವಾಪಸ್ ಕೊಟ್ಟರು ಇನ್ನು ಕೆಲವು ಅವರೇ ಇಟ್ಟುಕೊಂಡಿರುತ್ತಾರೆ.

ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

(ರೂಪ ಆರ್ ಕುಲಕರ್ಣಿ)
4ನೇ ಅ ಮು ಮ ದಂ, ಬೆಂಗಳೂರು